**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 31.05.2021.

**1] ಗೋಲಗುಮ್ಮಜ ಪೊಲೀಸ ಠಾಣೆ ಯುಡಿ ನಂ: 15/2021 ಕಲಂ: 174 ಸಿ.ಆರ್.ಪಿ.ಸಿ.**

ದಿನಾಂಕ: 29.05.2021 ರಂದು ಸಾಯಂಕಾಲ 04.00 ಗಂಟೆಯಿಂದ ರಾತ್ರಿ 09.00 ಗಂಟೆ ನಡುವಿನ ಅವಧಿಯಲ್ಲಿ ಇದರಲ್ಲಿಯ ಅನಾಮಧೇಯ ಗಂಡಸು, ಅಂದಾಜು ವಯಸ್ಸು, 30-35 ವರ್ಷ, ವಿಳಾಸ ತಿಳಿದು ಬಂದಿರುವುದಿಲ್ಲಾ. ಈತನು ವಿಜಯಪುರ ಶಹರದ ಸ್ಟೇಷನ್ ರಸ್ತೆಯ ದರಬಾರ ಆಟೋಮೊಬೈಲ್ಸ್ ಅಂಗಡಿಯ ಪಕ್ಕದ ಜಾಗೆಯಲ್ಲಿ ತನಗಿರುವ ಯಾವುದೋ ಖಾಯಿಲೆಯಿಂದಾಗಲೀ ಅಥವಾ ಹೃದಯಾಘಾತದಿಂದಾಗಲೀ ಮೃತಪಟ್ಟಿರಬಹುದು. ಸದರಿ ಮೃತನ ವಾರಸುದಾರರು ಸಿಗಬಹುದೆಂದು ತಿಳಿದು ಇಲ್ಲಿಯವರೆಗೆ ಹುಡಕಾಡಲಾಗಿ ಯಾರು ವಾರಸುದಾರರು ಪತ್ತೆಯಾಗದ ಕಾರಣ ಈ ದಿವಸ ತಡವಾಗಿ ವರದಿಯನ್ನು ನೀಡಿದ್ದು, ಸದರಿಯವನ ಮರಣದಲ್ಲಿ ಯಾವುದೇ ಸಂಶಯ ಇರುವುದಿಲ್ಲಾ ಈ ಬಗ್ಗೆ ಜಯಪ್ರಕಾಶ್ ಗುಗದಡ್ಡಿ, ಸಿಪಿಸಿ-605, ಗೋಳಗುಮ್ಮಜ್ ಪೊಲೀಸ್ ಠಾಣೆ, ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 30.05.2021 ರಂದು ಗೋಲಗುಮ್ಮಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಇಂಡಿ ಗ್ರಾಮೀಣ ಪೊಲಿಸ್ ಠಾಣೆ ಗುನ್ನಾ. ನಂ: 99/2021 ಕಲಂ: 379 ಐಪಿಸಿ & 31[ಆರ್], ಮತ್ತು 42 ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳು 1994 ರ ನಿಯಮ.**

ದಿನಾಂಕ: 30.05.2021 ರಂದು 1500 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1) ಪ್ರದೀಪ ಕರ್ಜಗಿ 2) ನೀಲಪ್ಪ ಬಾಬು ಮಕಣಾಪೂರ ಸಾ: ಇಬ್ಬರೂ ನಾಗರಳ್ಳಿ ತಾ: ಇಂಡಿ ಇವರು ಸರಕಾರದಿಂದಾಗಲಿ ಅಥವಾ ಸಂಭಂದಪಟ್ಟ ಇಲಾಖೆಯಿಂದಾಗಲಿ ಅನುಮತಿಯನ್ನು ಪಡೆದುಕೊಳ್ಳದೆ ತಮ್ಮ ತಮ್ಮ ಪಾಯ್ದೆಗೋಸ್ಕರ ಭೀಮಾ ನದಿಯಲ್ಲಿರುವ ಸಾದಾ ಮರಳನ್ನು ಕಳ್ಳತನದಿಂದ ತಂದು ಆರೋಪಿ 1) ಪ್ರದೀಪ ಕರ್ಜಗಿ ಈತನು ನಾಗರಳ್ಳಿ ಹದ್ದಿಯಲ್ಲಿ ಬರುವ ತನ್ನ ಜಮೀನದಲ್ಲಿ 3 ಕಡೆಗೆ ಅಕ್ರಮವಾಗಿ 6.00.000/- ರೂ ಕಿಮ್ಮತ್ತಿನ 200 ಬ್ರಾಸಿನಷ್ಟು ಮರಳಿನ ಗುಡ್ಡೆಗಳು ಹಾಕಿದ್ದು ಹಾಗೂ ಆರೋಪಿ 2) ನೀಲಪ್ಪ ತಂ. ಬಾಬು ಮಕಣಾಪೂರ ಈತನು ನಾಗರಳ್ಳಿ ಗ್ರಾಮದ ರುದ್ರ ಭೂಮಿಯಲ್ಲಿ 1.50.000/- ರೂ ಕಿಮ್ಮತ್ತಿನ 50 ಬ್ರಾಸಿನಷ್ಟು ಸಾದಾ ಮರಳಿನ ಗುಡ್ಡೆಯನ್ನು ಹಾಕಿದ್ದು, ಹೀಗೆ ಒಟ್ಟು 7.50.000/- ರೂ. ಕಿಮ್ಮತ್ತಿನ 250 ಬ್ರಾಸ್‌ದಷ್ಟು ಸಾದಾ ಮರಳನ್ನು ವಶಪಡಿಸಿಕೊಂಡಿದ್ದು, ಇರುತ್ತದೆ. ಈ ಸಂಗಡ ಪಂಚನಾಮೆಯನ್ನು ಹಾಜರ ಪಡಿಸಿದ್ದು ಇರುತ್ತದೆ" ಜಪ್ತ ಮಾಡಿದ ಮುದ್ದೆಮಾಲಿನ ವಿವರ 1] ಜಮೀನದಲ್ಲಿ ಹಾಗೂ ನಾಗರಳ್ಳಿ ಗ್ರಾಮದ ರುದ್ರಭೂಮಿಯಲ್ಲಿ ಅಕ್ರಮವಾಗಿ ಒಟ್ಟು 250 ಬ್ರಾಸ್‌ದಷ್ಟು ಸಾದಾ ಮರಳು ಸಂಗ್ರಹ ಮಾಡಿದ್ದು ಅದರ ಒಟ್ಟು ಕಿ॥ 7,50,000-00 ರೂ. ಗಳಾಗಬಹುದು. ಈ ಬಗ್ಗೆ ಸ:ತ: ಶ್ರೀಧರ ದೊಡ್ಡಿ ಡಿಎಸ್‌ಪಿ. ಇಂಡಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 30.05.2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಇಂಡಿ ಗ್ರಾಮೀಣ ಪೊಲಿಸ್ ಠಾಣೆ ಗುನ್ನಾ. ನಂ: 98/2021 ಕಲಂ: 379 ಐಪಿಸಿ & 31[ಆರ್], ಮತ್ತು 42 ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳು 1994 ರ ನಿಯಮ.**

ದಿನಾಂಕ: 30.05.2021 ರಂದು 0930 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ರವಿಂದ್ರ ವಿಜಯಪುರ ಕದಂ ಸಾ:ಲೋಣಿ ಕೆಡಿ ಹಾಲಿ ವಸ್ತಿ ಸೋಲಾಪುರ 2] ಅಭಿಮನ್ಯ ಅರ್ಜುನ ಕರಾತ ಸಾ: ಲೋಣಿ ಕೆಡಿ ಇವರು ತಮ್ಮ ಜಮೀನದಲ್ಲಿ ಪರಿಶೀಲನೆ ಮಾಡಿ ನೋಡಲಾಗಿ ಸದರಿ ಜಮೀನದ ಪೂರ್ವದ ದಂಡೆಗೆ ಮರಳಿನ ಗುಡ್ಡೆ ಅಂದಾಜ 150 ಬ್ರಾಸನಷ್ಟು ಸಂಗ್ರಹಿಸಿದ್ದು ಸದರಿ ಜಮೀನು ಆರೋಪಿ ನಂ:1 ನೇದವನಾದ ರವಿಂದ್ರ ತಂ: ವಿಜಯಪುರ ಕದಂ ಸಾ:ಲೋಣಿ ಕೆಡಿ ಹಾಲಿ ವಸ್ತಿ ಸೋಲಾಪುರ ಈತನು ತನ್ನ ಜಮೀನವನ್ನು ಸಾಗುವಳಿ ಮಾಡಲು ಆರೋಪಿ ನಂ:2 ನೇದವಾನದ ಅಭಿಮನ್ಯ ಅರ್ಜುನ ಕರಾತ ಸಾ: ಲೋಣಿ ಕೆಡಿ ನೇದವನಿಗೆ ನೀಡಿದ್ದು ಸದರಿ ಇಬ್ಬರು ಆರೋಪಿತರು ಕೂಡಿಕೊಂಡು ಭೀಮಾನದಿಯಿಂದ 150 ಬ್ರಾಸ ಅಕಿ: 4,50,000 ರೂ ಕಿಮ್ಮತ್ತಿನ ಸಾಧಾ ಮರಳನ್ನು ಕಳ್ಳತನದಿಂದ ತಮ್ಮ ಜಮೀನದಲ್ಲಿ ಸಂಗ್ರಹ ಮಾಡಿದ್ದರಿಂದ ಸದರಿ ಇಬ್ಬರು ಆರೋಪಿತರ ಮೇಲೆ ನಮ್ಮದು ಸರಕಾರ ಪರವಾಗಿ ಪಿರ್ಯಾದಿ ಇರುತ್ತದೆ. ಈ ಬಗ್ಗೆ ಸ:ತ: ಶ್ರೀಧರ ದೊಡ್ಡಿ ಡಿಎಸ್‌ಪಿ ಇಂಡಿ ಇಂಡಿ ಉಪವಿಭಾಗ ರವರು ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 30.05.2021 ರಂದು ಇಂಡಿ ಗ್ರಾಮೀಣ ಪೊಲೀಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ತಾಳಿಕೋಟಿ ಪೊಲಿಸ್ ಠಾಣೆ ಗುನ್ನಾ. ನಂ: 99/2021 ಕಲಂ: 143. 147. 148. 323. 324. 326. 307. 354. 504. 506 ಸಹ 149 ಐಪಿಸಿ**

ದಿನಾಂಕ: 30.05.2021 ರಂದು 19.00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1] ರಮೇಶ ಸಿದ್ರಾಮಪ್ಪ ಐರಡ್ಡಿ 2] ಸಿದ್ರಾಮಪ್ಪ ಈಶ್ವರಪ್ಪ ಐರಡ್ಡಿ. 3] ಹಣಮಂತ್ರಾಯ ಸಿದ್ದಪ್ಪ ಐನಾಪೂರ 4] ಸಿದ್ರಾಮರಡ್ಡಿ ಶರಣಪ್ಪ ಐನಾಪೂರ. 5] ವೀರಪಾಕ್ಷಿ ಬಸನಗೌಡ ಬಿರಾದಾರ. 6] ಅನ್ನಮ್ಮ @ ಸರಸ್ವತಿ. ಗಂ॥ ಸಿದ್ರಾಮಪ್ಪ ಐರಡ್ಡಿ.[ಐನಾಪೂರ] ಸಾ॥ ಭಂಟನೂರ. ತಾ॥ ತಾಳಿಕೋಟಿ ಪಿರ್ಯಾದಿ ಮತ್ತು ಆರೋಪಿತರು ಸಂಬಂದಿಕರಿದ್ದು ಸಾಕ್ಷಿದಾರಳಾದ ಸಂಗಮ್ಮ ಐನಾಪೂರ ಇವಳ ಹೆಸರಲ್ಲಿ ಇರುವ ಭಂಟನೂರ ಗ್ರಾಮದ ಜಮೀನ ರಿನಂ 183/2 ನೇದು 4 ಎಕರೆ ನೇ ಜಮೀನ ಸಲವಾಗಿ ತಂಟೆ- ತಕರಾರುವಾಗಿದ್ದು. ಸಂಗಮ್ಮ ಇವಳು ಜಮೀನದಲ್ಲಿ ಮೇಲೆ ಆರೋಪಿತರು ಸಾಗುವಳಿ ಮಾಡದಂತೆ ಕೋರ್ಟನಿಂದ ಸ್ಟೇ ಮಾಡಿಸಿದ್ದು ಈ ಸ್ಟೇ ಮಾಡಿಸಲು ಶಿವರಡ್ಡಿ ಐನಾಪೂರ ಇವನೇ ಕಾರಣ ಎಂದು ತಿಳಿದು ಅವನಿಗೆ ಖಲಾಸ ಮಾಡುವ ಉದ್ದೇಶದಿಂದ ಆರೋಪಿತರು ಅಕ್ರಮಕೂಟ ಗೈರ ಕಾಯ್ದೆಶೀರ ಮಂಡಳಿಯಾಗಿ ಕೈಯಲ್ಲಿ ಬಡಿಗೆ ಕಲ್ಲು. ಜಂಬೆ. ಹಾಗೂ ಡಿಜೇಲ್ ತಗೆದುಕೊಂಡು ಹೋಗಿ ಶಿವರಡ್ಡಿ ಇವನ ಸಂಗಡ ಜಗಳ ತಗೆದು ಕೊಲೆ ಮಾಡುವ ಉದ್ದೇಶದಿಂದ ಅವನಿಗೆ ಜಂಬೆ ಚುಚ್ಚಿ ಗಾಯ ಪಡಿಸಿದ್ದು. ಕಲ್ಲು ಎತ್ತಿಹಾಕಿ ಸೊಂಟಕ್ಕೆ ಒಳಪೆಟ್ಟು ಪಡಿಸಿದ್ದು. ಅವನಿಗೆ ಉರಿ ಹಚ್ಚಿ ಸುಡಲು ಮೈಮೇಲೆ ಡಿಜೇಲ್ ಹಾಕಿದಾಗ ಬಿಡಿಸಿಕೊಳ್ಳಲು ಹೋದ ಪಿರ್ಯಾದಿಗೆ ಮತ್ತು ಸಾಕ್ಷಿ ಜನರಾದ ಸಂಗಮ್ಮ ಸಿದ್ರಾಮರಡ್ಡಿ ಐನಾಪೂರ. ಇವಳಿಗೆ ಹೊಡಿ ಬಡಿ ಮಾಡಿ ಹೆಣ್ಣುತನಕ್ಕೆ ಅವಮಾನ ಪಡಿಸಿ. ವಿಶ್ವನಾಥರಡ್ಡಿ ಸಿದ್ರಾಮರಡ್ಡಿ ಐನಾಪೂರ ಇವನಿಗೆ ಬಡಿಗೆಯಿಂದ ಹೊಡಿದು ಕೈ ಮುರೆದು ಹಲ್ಕಟ ಬೈದಾಡಿ ಜೀವದ ಧಮಕಿ ಹಾಕಿದ್ದು ಇರುತ್ತದೆ. ಈ ಬಗ್ಗೆ ಪ್ರಭುಗೌಡ ಬಸವಂತ್ರಾಯ ಐನಾಪೂರ. ಸಾ॥ ಭಂಟನೂರ. ರವರು ಫಿರ್ಯಾದಿ ಕೊಟ್ಟ ಮೇರೆಗೆ, ದಿನಾಂಕ: 30.05.2021 ರಂದು ತಾಳಿಕೋಟಿ ಪೊಲೀಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.